**ಮುಖ್ಯ ವಿಚಾರಣೆಃ** ಅರ್ಜಿದಾರರ ಪರ ಶ್ರೀಃ ಹೆಚ್ ಆರ್ ಪಿ ವಕೀಲರಿಂದ

ಈ ದಿನಾಂಕಃ 11-04-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋಧಿಸಲಾಯಿತು.

ನಾನು ಈ ಕೇಸನಲ್ಲಿ ಅರ್ಜಿದಾರನು ಇದ್ದು PW-1 ಅಂತಾ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸತ್ಯ ಪ್ರತಿಜ್ಞೆ ಮೇರೆಗೆ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸರಿ ಇರುತ್ತವೆ

ರೆಫರೆನ್ಸ್ ಅರ್ಜಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಅಂತಾ, ಆಸಂಗಿ ಗ್ರಾಮದ ಸನಂ 124/4/ಳ, ಪಹಣಿಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಅಂತಾ, ನಂದಿ ಸಕ್ಕರೆ ಕಾರ್ಖಾನೆಯ ಕಬ್ಬಿನ ದರಪಟ್ಟಿ ಹಾಜರುಪಡಿಸಿದ್ದು ಅದನ್ನು ನಿಪಿ-3 ಅಂತಾ, ಸಹಾಯಕ ಕೃಷಿ ನಿರ್ದೇಶಕರು ಇವರು ವಿವಿಧ ಬೆಳೆಗಳ ಸರಸರಿ ಇಳುವರಿ ಪ್ರಮಾಣಪತರ ನೀಡಿರುವುದನಡ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಅಂತಾ ಗುರುತಿಸಲಾಗಿದೆ.

**ಪಾಟೀಸವಾಲುಃ 3 ನೇ ಎದುರುದಾರರ ಪರ ಶ್ರೀ ಸಿ ಆರ್ ಕೆ ವಕೀಲರಿಂದಃ-**

ಹಿಪ್ಪರಗಿ ಗ್ರಾಮದ ಜಮೀನುಗಳು ಭೂಸಾವಧಿಚಿನ ಪಡೆಕೊಳ್ಳುವ ಮುನ್ನ 4(1) 6(1) ನೋಟಿಸ ಕೊಟ್ಟಿರುತ್ತಾರೆಂದರೆ ಸರಿ. ಸದರಿ ಜಮೀನು ಸ್ವಾಧೀನಪಡಿಸಿಕೊಳ್ಳುವ ಮುಂಚೆ ಸರಿಯಾಗಿ ಪರಿಶೀಲಿಸಿ ಯೋಗ್ಯ ಬೆಲೆ ಕೊಟ್ಟಿರುತ್ತಾರೆಂದರೆ ಸರಿ ಅಲ್ಲ. ಸದರಿ ಜಮೀನು ನದಿಗೆ ಹೊಂದಿಕೊಂಡಿರುತ್ತವೆಂದರೆ ಸರಿ. ಸದರಿ ಜಮೀನು ಮೇವು, ಹುಲ್ಲು , ಕರಕಿ ಬೆಳೆಯುವ ಜಮೀನು ಇರುತ್ತವೆಂದರೆ ಸರಿ ಅಲ್ಲ. ಸದರಿ ಜಮೀನಿನಲ್ಲಿ ಕಬ್ಬು ಬೆಳೆಯುತ್ತೇವೆ ಅಂತಾ ಸಾಕ್ಷಿ ನುಡಿಯುತ್ತಾರೆ. ಪ್ರತಿ ವರ್ಷ ಮಳೆಗಾಲದಲ್ಲಿ ಹೊಳೆ ಬಂದಾಗ ಸದರಿ ಜಮೀನುಗಳು ಮುಳುಗುತ್ತವೆ ಎಂದರೆ ಸರಿ. ಅದೇ ರೀತಿ ಮಳೆ ಇಲ್ಲದಾಗ ಸದರಿ ಜಮೀನು ಖಾಲಿ ಇರುತ್ತದೆ ಎಂದರೆ ಸರಿ ಅಲ್ಲ. ಅದೇ ರೀತಿ ಮಳೆಗಾಲ ಹೋದ ನಂತರ ಕಬ್ಬಿನ ಬೆಳೆಯನ್ನು ತೋಟದಿಂದ ತೆಗೆಯುತ್ತೇವೆಂದರೆ ಸರಿ. ಜಮೀನು ಹೊಳೆಯಲ್ಲಿ ಮುಳುಗಿದರೆ ಕಬ್ಬು ನಷ್ಟವಾಗುತ್ತದೆ ಎಂದರೆ

ಸರಿ ಅಲ್ಲ. ಅದೇ ರೀತಿ ಮಳೆ ನಿಂತ ನಂತರ ಕಬ್ಬಿನಿಂದ ಹೆಚ್ಚು ಉತ್ಪನ್ನ ಬರುತ್ತದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತೇನೆಂದರೆ ಸರಿ ಅಲ್ಲ. ನನ್ನ ಜಮೀನಿನಲ್ಲಿ ನೀರಾವರಿ ಇದೆ ಅಂತಾ ತೋರಿಸಲು ಕೆ ಇ ಬಿ ಪರಮೀಶನ ತೆಗೆಸಿರುತ್ತೇನೆ ಆದರೆ ಹಾಜರುಪಡಿಸಿರುವುದಿಲ್ಲ. ನಮ್ಮ ಜಮೀನಿನಲ್ಲಿ ಒಂದು 10 ಹೆಚ್ ಪಿ ಮತ್ತು ಒಂದು 7.5 ಹೆಚ್ ಪಿ ಮೋಟಾರ ಇರುತ್ತದೆ. ಹೊಳೆಯಿಂದ ನೀರು ಬಳಸಲು ಪರಮೀಶನ ತೆಗೆದುಕೊಂಡಿರುತ್ತೇನೆ ಸದರಿ ಪರಮೀಶನ ಹಾಜರುಪಡಿಸಿರುವುದಿಲ್ಲ. ಸದರಿ ಜಮೀನಿನಲ್ಲಿ 80-90 ಟನ್ ಕಬ್ಬುನ ಬೆಳೆಯನ್ನು ನಂದಿ ಶುಗರ ಫ್ಯಾಕ್ಟರಿಗೆ ಕಳುಹಿಸುತ್ತೇವೆಂದು ಸುಳ್ಳು ಸಾಕ್ಷಿ ಹೇಳುತ್ತೇನೆಂದರೆ ಸರಿ ಅಲ್ಲ. ಅದೇ ರೀತಿ ಎದುರುದಾರರು ಸ್ಥಳಕ್ಕೆ ಬಂದು ಸರಿಯಾಗಿ ಪರಿಶೀಲಿಸಿ ಪರಿಹಾರ ನಿಗದಿ ಮಾಡಿದ್ದರೂ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆಸ ರಿ ಅಲ್ಲ. ಭೂಸ್ವಾಧೀನಪಡಿಸಿಕೊಂಡ ಜಮೀನು ಎಕರೆಗೆ 25-30 ಲಕ್ಷ ಬೆಲೆ ಬಾಳುತ್ತದೆ ಎಂದು ತೋರಿಸಲು ಸರಕಾರದಿಂದ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

**ಪಾಟೀಸವಾಲುಃ 1 ಮತ್ತು 2 ನೇ ಎದುರುದಾರರ ಪರ ಆರ್ ಜಿ ಪಿ ವಕೀಲರಿಂದಃ-**

3 ನೇ ಎದುರುದಾರರು ಮಾಡಿದ ಪಾಟೀಸವಾಲನ್ನು 1 ಮತ್ತು 2 ನೇ ಎದುರುದಾರ ಪರ ವಕೀಲರು ಅಳವಡಿಸಿಕೊಳ್ಳಲು ಕೋರಿದ್ದರಿಂದ ಅಳವಡಿಸಿಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಹಿ/-

ಹಿರಿಯ ದಿವಾಣಿ ನ್ಯಾಯಾಧೀಶರು

ಬನಹಟ್ಟಿ